KAKP200001442019

# 1 ನೇ ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕುಷ್ಟಗಿ

ಉಪಸ್ಥಿತರುಃ

**ಶ್ರೀ ಮಹಾಂತೇಶ ಚೌಲಗಿ., ಬಿ.ಎ., ಎಲ್‌ಎಲ್.ಬಿ.,**
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕುಷ್ಟಗಿ.

ದಿನಾಂಕಃ **01** ನೇ ಆಗಸ್ಟ್, **2026**

**ಅಪರಾಧಿಕ ಪ್ರಕರಣ** ಸಂಖ್ಯೆಃ**108/2019**

| | | |
|---|---|---|
| ಫಿರ್ಯಾದುದಾರರು | ಃ | ಸರ್ಕಾರದ ಪರವಾಗಿ, ಆರಕ್ಷಕ ಉಪನಿರೀಕ್ಷಕರು, ತಾವರಗೇರಾ ಪೊಲೀಸ್ ಠಾಣೆ, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ |

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ –

| | | |
|---|---|---|
| ಆರೋಪಿ | ಃ | ವಿಶ್ವನಾಥ |
| ತಂದೆ | ಃ | ವಿರುಪಣ್ಣಾ ಹುಡೇದಮನಿ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ | ಃ | ತಾವರಗೇರಾ, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ. |

(ಆರೋಪಿತರ ಪರ ವಕೀಲರು ಶ್ರೀ.ಕೆ.ಎಂ.ಪಿ., ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | ಃ | 16.0.2018 |
| ಅಪರಾಧ ವರದಿಯಾದ ದಿನಾಂಕ | ಃ | 16.0.2018 |
| ಅಂತಿಮವರದಿ ಸಲ್ಲಿಸಿದ ದಿನಾಂಕ | ಃ | 10.01.2019 |
| ದೋಷಾರೋಪಣೆ ರಚಿಸಿದ ದಿನಾಂಕ | ಃ | 04.11.2025 |
| ಆರೋಪಿತರು ದಸ್ತಗಿರಿಯಾದ ದಿನಾಂಕ | ಃ | ಜಾಮೀನಿನ ಮೇಲೆ ಇರುತ್ತಾರೆ |
| ಫಿರ್ಯಾದುದಾರರ ಹೆಸರು | ಃ | ಶ್ರೀ.ಸುರೇಶ ತಳವಾರ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ | 10.11.2025 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | ಃ | 23.06.2026 |
| ಅಪರಾಧ ಕಾಯ್ದೆ ಮತ್ತು ಕಲಂ | ಃ | ಭಾರತೀಯ ದಂಡ ಸಂಹಿತೆ ಕಲಂ.379 |
| ನ್ಯಾಯಾಧೀಶರ ಅಭಿಪ್ರಾಯ | ಃ | ಆರೋಪಿತನನ್ನು ನಿರ್ದೋಷಿ ಎಂದು ಪರಿಗಣಿಸಿದೆ. |

| ಆರೋಪಿಯ ಶ್ರೇಣಿ | ಆರೋಪಿಯ ಹೆಸರು | ಬಂಧನದ ದಿನಾಂಕ | ಜಾಮೀನಿನ ಮೇಲೆ ಬಿಡುಗಡೆಯಾದ ದಿನಾಂಕ | ಆರೋಪಿತರ ಮೇಲೆ ಆಪಾದಿಸಲಾದ ಅಪರಾಧಗಳು | ಖುಲಾಸೆಯೇ ಅಥವಾ ಶಿಕ್ಷೆಯೇ | ಶಿಕ್ಷೆವಿಧಿಸಲಾಗಿದೆಯೇ | ದಂ.ಪ್ರ.ಸಂ. ಕಲಂ **428** ರ ರೀತ್ಯಾ ವಿಚಾರಣೆಯ ಸಮಯದಲ್ಲಿ ಬಂಧನಕ್ಕೊಳಗಾದ ಅವಧಿ |
|---|---|---|---|---|---|---|---|
| | ವಿಶ್ವನಾಥ | ಇಲ್ಲ | - | ಭಾ.ದಂ.ಸಂ.ಕಲಂ. 379 | ಖುಲಾಸೆ | ಇಲ್ಲ | ಅನ್ವಯಿಸುವುದಿಲ್ಲ |

# ತೀರ್ಪು

ಆರೋಪಿ ಭಾರತೀಯ ದಂಡ ಸಂಹಿತೆ ಕಲಂ **379** ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು ಠಾಣಾಧಿಕಾರಿಗಳು, ತಾವರಗೇರಾ ಪೊಲೀಸ್ ಠಾಣೆರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

## 2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶಃ

ದಿನಾಂಕ: **16.10.2018** ರಂದು ಬೆಳಿಗ್ಗೆ 07–30 ಗಂಟೆಯ ಸುಮಾರಿಗೆ ತಾವರಗೇರಾ ಪೋಲಿಸ್ ಠಾಣಾ ವ್ಯಾಪ್ತಿಯ ಕನ್ನಾಳ ಸೀಮಾದ ಹಳ್ಳದಲ್ಲಿ ಆರೋಪಿತನು ಟಿಪ್ಪರ್ ಲಾರಿಯಲ್ಲಿ ಅನಧಿಕೃತವಾಗಿ ಸರ್ಕಾರದ ಪರವಾನಿಗೆ ಇಲ್ಲದೆ ಸರ್ಕಾರದ ಸ್ವಾದೀನದಲ್ಲಿದ್ದ ರೂ.4,000/– ಬೆಲೆ ಬಾಳುವ ಚರ ಸ್ವತ್ತು ಆದ ಉಸುಕನ್ನು ಸರ್ಕಾರದವರ ಸ್ವಾಧಿನದಿಂದ ಅವರ ಸಮ್ಮತಿ ಇಲ್ಲದೇ ಅಪ್ರಮಾಣಿಕವಾಗಿ ತೆಗೆದುಕೊಳ್ಳುವ ಉದ್ದೇಶದಿಂದ ಅಕ್ರಮವಾಗಿ ಕಳ್ಳತನ ಮಾಡಿದ್ದು ಇರುತ್ತದೆ ಎಂದು ಠಾಣಾಧಿಕಾರಿಗಳು**,** ತಾವರಗೇರಾ ಪೊಲೀಸ್ ಠಾಣೆರವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ **379** ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಚಾಸಾ–1 ರವರು ನೀಡಿದ ದೂರಿನ ಆಧಾರದ ಮೇಲೆ ತಾವರಗೇರಾ ಪೊಲೀಸರು**,** ತಮ್ಮ ಠಾಣಾ ಅಪರಾಧಿಕ ಕ್ರಮ ಸಂಖ್ಯೆ **156/2018** ಭಾರತೀಯ ದಂಡ ಸಂಹಿತೆ ಕಲಂ **379** ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ.

**4.** ತನಿಖಾಧಿಕಾರಿಗಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭಾರತೀಯ ದಂಡ ಸಂಹಿತೆ ಕಲಂ **379** ರಡಿಯಲ್ಲಿ ಮಾಡಲಾದ ಅಪರಾಧದ ಬಗ್ಗೆ ಆರೋಪಿತನ ವಿರುದ್ಧ ಅಪರಾಧಿಕ ಸಂಜ್ಞೆಯನ್ನು ತೆಗೆದುಕೊಂಡು ಮತ್ತು ಪ್ರಕರಣವನ್ನು ನೋಂದಾಯಿಸಿಕೊಂಡು ಸಮನ್ಸ್ ಜಾರಿಮಾಡಿದ್ದು, ಅದರಂತೆ ಆರೋಪಿತನು ತಮ್ಮ ವಕೀಲರ ಮೂಲಕ ಹಾಜರಾಗಿದ್ದು ತದನಂತರ ಅಪರಾಧಿಕ ಪ್ರಕ್ರಿಯ ಸಂಹಿತೆ ಕಲಂ.207 ರಡಿಯಲ್ಲಿ ಅಭಿಯೋಜನಾ ದಾಖಲೆಗಳನ್ನು ಪೂರೈಸಿ, ಆರೋಪಿತನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಲಾಗಿರುತ್ತದೆ.

**5**. ಆರೋಪಿತರ ವಾದವನ್ನು ಆಲಿಸಿದ ನಂತರ ಭಾರತೀಯ ದಂಡ ಸಂಹಿತೆ ಕಲಂ **379** ರಡಿಯಲ್ಲಿ ದೋಷಾರೋಪಣೆಯನ್ನು ಸಿದ್ಧಪಡಿಸಿ, ಓದಿ ಹೇಳಲಾಗಿ ಆರೋಪಿತನು ತಾನು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಮತ್ತು ವಿಚಾರಣೆಯಾಗಬೇಕೆಂದು ಕೋರಿರುತ್ತಾರೆ.

**6**. ಅಭಿಯೋಜನೆ ಪರ ಪ್ರಕರಣವನ್ನು ರುಜುವಾತು ಪಡಿಸಲು ಒಟ್ಟು **10** ಸಾಕ್ಷಿಗಳ ಪೈಕಿ **03** ಸಾಕ್ಷಿಗಳನ್ನು ಪ್ರಾಸಾ**–1** ರಿಂದ **3** ಎಂದು, **4** ದಾಖಲೆಗಳನ್ನು ಕ್ರಮವಾಗಿ ನಿಪಿ**–1** ರಿಂದ **4** ಎಂದು ಮತ್ತು 1 ಮುದ್ದೆ ಮಾಲನ್ನು ಗುರುತಿಸಲಾಯಿತು.

**7.** ಅಭಿಯೋಜನೆ ಪ್ರಕರಣ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತನ ವಿರುದ್ದ ವ್ಯತಿರಿಕ್ತ ಸಾಕ್ಷ್ಯಗಳು ಕಂಡುಬಂದಿರುವುದರಿಂದ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತನು ಅಭಿಯೋಜನೆ ಪ್ರಕರಣದ ಸಾಕ್ಷಿದಾರರು ನುಡಿದಿರುವ ಸಾಕ್ಷಿಯನ್ನು ಅಲ್ಲಗಳೆದಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿಗಳು ಇರುವುದಿಲ್ಲ ಎಂದು ಹೇಳಿರುತ್ತಾರೆ.

**8**. ಅಭಿಯೋಜನೆಯು ಈ ಕೆಳಕಂಡ ಅಂಶಗಳನ್ನು ಸಂಶಯಾತೀತವಾಗಿ ನಿರೂಪಿಸುವುದೇ:

1. ದಿನಾಂಕ: **16.10.2018** ರಂದು ಬೆಳಿಗ್ಗೆ 07–30 ಗಂಟೆಯ ಸುಮಾರಿಗೆ ತಾವರಗೇರಾ ಪೋಲಿಸ್ ಠಾಣಾ ವ್ಯಾಪ್ತಿಯ ಕನ್ನಾಳ ಸೀಮಾದ ಹಳ್ಳದಲ್ಲಿ ಆರೋಪಿತನು ಟಿಪ್ಪರ್ ಲಾರಿಯಲ್ಲಿ ಅನಧಿಕೃತವಾಗಿ ಸರ್ಕಾರದ ಪರವಾನಿಗೆ ಇಲ್ಲದೆ ಸರ್ಕಾರದ ಸ್ವಾದೀನದಲ್ಲಿದ್ದ ರೂ.4,000/– ಬೆಲೆ ಬಾಳುವ ಚರ ಸ್ವತ್ತು ಆದ ಉಸುಕನ್ನು ಸರ್ಕಾರದವರ ಸ್ವಾಧಿನದಿಂದ ಅವರ ಸಮ್ಮತಿ ಇಲ್ಲದೇ ಅಪ್ರಮಾಣಿಕವಾಗಿ ತೆಗೆದುಕೊಳ್ಳುವ ಉದ್ದೇಶದಿಂದ ಅಕ್ರಮವಾಗಿ ಕಳ್ಳತನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.**379** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಯಾವ ಆದೇಶ?

**9**. ಅಭಿಯೋಜನೆ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತನ ಪರವಾಗಿ ಶ್ರೀ ಕೆ.ಎಮ್.ಪಿ ವಕೀಲರ ವಾದವನ್ನು ಆಲಿಸಲಾಯಿತು.

**10**. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ 1 ಃ - ನಕಾರಾತ್ಮಕವಾಗಿ

ಅಂಶ 2 ಃ - ಅಂತಿಮ ಆದೇಶದಂತೆ,
ಈ ಕೆಳಕಾಣಿಸಿರುವ ಕಾರಣಗಳಿಗಾಗಿ

## ಕಾರಣಗಳು

**11.** ಅಂಶ **1** **:–** ಈ ಪ್ರಕರಣದಲ್ಲಿ ಆರೋಪಿತರ ಮೇಲೆ ಮಾಡಲಾದಂತಹ ಆರೋಪವನ್ನು ರುಜುವಾತು ಪಡಿಸಲು ಚಾಸಾ–**1**/ಸುರೇಶ ತಳವಾರ ಇವರನ್ನು ಪ್ರಾಸಾ–**3** ಎಂದು ವಿಚಾರಣೆಗೊಳಪಡಿಸಿರುತ್ತಾರೆ. ಪ್ರಾಸಾ–3 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ**16.10.2018** ರಂದು ಬೆಳಗ್ಗೆ **6.00** ಗಂಟೆಗೆ ನಾನು ಕಛೇರಿಯಲ್ಲಿದ್ದಾಗ ಕನ್ನಾಳ ಗ್ರಾಮದಲ್ಲಿ ಆರೋಪಿಯು ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವ ಕುರಿತು ಭಾತ್ಮಿ ಬಂದ ಮೇರೆಗೆ ಚಾಸಾ-**2** ಮತ್ತು ಚಾಸಾ-**3** ಮತ್ತು ಪಂಚರರು ಮತ್ತು ನಾನು ಹಾಗೂ ಚಾಸಾ-**4** ರಿಂದ ಚಾಸಾ-**7** ರವರ ಕೂಡಿಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಚಾಸಾ-**4** ರವರಿಗೆ ಇಬ್ಬರು ಪಂಚರರು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ಚಾಸಾ-**4** ರವರು ಚಾಸಾ-**2** ಮತ್ತು ಚಾಸಾ-**3** ರವರನ್ನು ಕರೆದುಕೊಂಡು ಬಂದಿರುತ್ತಾರೆ. ನಂತರ ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ನೋಡಿ ಭಾತ್ಮಿ ಮಾಹಿತಿಯನ್ನು ಖಚಿತಪಡಿಸಿಕೊಂಡು ಪಂಚರರ ಸಮಕ್ಷಮ ದಾಳಿ ಮಾಡಿದಾಗ ಆರೋಪಿಯು ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ನಂತರ ಗುನ್ನೆ ಸ್ಥಳದಲ್ಲಿದ್ದ ಟಿಪ್ಪರ್ ಲಾರಿಯನ್ನು ಪಂಚರರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೇವೆ. ಟಿಪ್ಪರ್ ಲಾರಿಯಲ್ಲಿ **10** ಕ್ಯೂಬಿಕ್ ಮೀಟರ್ ಮರಳು ಕಂಡುಬಂದಿರುತ್ತದೆ. ನಂತರ ಅದೇ ದಿನ ಮದ್ಯಾಹ್ನ **12.15** ರಿಂದ **1.00** ಗಂಟೆಯವರೆಗೆ ಪಂಚರರ ಸಮಕ್ಷಮ ಜಪ್ತಿಪಂಚನಾಮೆಯನ್ನು ಜರುಗಿಸಿ ಮಾದರಿ

ಸಮೀಕ್ಷೆಗಾಗಿ 500 ಗ್ರಾಂ. ಮರಳನ್ನು ಪಂಚರರ ಸಮಕ್ಷಮ ಸಂಗ್ರಹಿಸಿ ಎ ಎಂಬ ಅಕ್ಷರದಿಂದ ಸೀಲ್ಡ್ ಹಾಕಿ ಜಪ್ತಿಪಡಿಸಿಕೊಂಡಿರುತ್ತೆವೆ. ನಂತರ ಮುದ್ದೆ ಮಾಲು ಮತ್ತು ಒಂದು ವರದಿಯೊಂದಿಗೆ ಠಾಣೆಗೆ ಬೆಳಗ್ಗೆ 9.30 ಗಂಟೆಗೆ ಬಂದು ಆರೋಪಿಯ ವಿರುದ್ದ ದೂರು ನೀಡಿರುತ್ತೆನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಆರೋಪಿ ಪರ ವಕೀಲರು ಪ್ರಾಸಾ–3 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ್ಯೂ ಸಹ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯಲು ವಿಫಲರಾಗಿರುತ್ತಾರೆ. ಇನ್ನು ಉಳಿದಂತೆ ಆರೋಪಿ ಪರ ವಕೀಲರು ಹಾಕಿರುವ ಎಲ್ಲಾ ಹಾರಿಕೆ ನಿರಾಕರಣೆಗಳನ್ನು ಪ್ರಾಸಾ–3 ರವರು ಅಲ್ಲಗಳೆದಿರುತ್ತಾರೆ.

**12.** ಪ್ರಸ್ತುತ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿಗಳು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಳ್ಳುವ ಮೊದಲು ತನಿಖೆ ಆರಂಭಿಸಿ ಆರೋಪಿಯ ದಸ್ತಗಿರಿಗೆ ಮುಂದಾಗಿರುತ್ತಾರೆ. ಈ ರೀತಿ ದಂಡ ಪ್ರಕ್ರಿಯೆ ಸಂಹಿತೆ ಕಲಂ 154 ಸಹ ಕಲಂ 157 ರ ಅಡಿಯಲ್ಲಿನ ಕಡ್ಡಾಯ ಉಪಬಂಧಗಳನ್ನು ಉಲ್ಲಂಘನೆ ಮಾಡಿರುತ್ತಾರೆ. ಈ ಸಮಯದಲ್ಲಿ ಈ ತೀರ್ಪನ್ನು ಅನ್ವಯಿಸುವುದು ಸೂಕ್ತ ಎನಿಸುತ್ತದೆ. ***The* Hon'ble Supreme Court decided between ' *Lalita Kumari v. Govt. of U.P.*, (2014) 2 SCC 1 in which Hon'ble Apex Court held at para no. 119. Therefore, in view of various counterclaims regarding registration or non-registration, what is necessary is only that the information given to the police must disclose the commission of a cognizable offence. In such a situation, registration of an FIR is mandatory. However, if no cognizable offence is made out in the information given, then the FIR need not be registered immediately and perhaps the police can conduct a sort of preliminary verification or inquiry for the limited purpose of ascertaining as to whether a cognizable offence has been committed. But, if the information given clearly mentions the commission of a cognizable offence, there is no other option but to register an FIR forthwith. Other**

**considerations are not relevant at the stage of registration of FIR, such as, whether the information is falsely given, whether the information is genuine, whether the information is credible, etc. These are the issues that have to be verified during the investigation of the FIR. At the stage of registration of FIR, what is to be seen is merely whether the information given ex facie discloses the commission of a cognizable offence. If, after investigation, the information given is found to be false, there is always an option to prosecute the complainant for filing a false FIR. ಈ ಮೇಲಿನ ತೀರ್ಪನ್ನು ಅನ್ವಯಿಸಿ ನೋಡಲಾಗಿ, ಸದರಿ ಪ್ರಕರಣದಲ್ಲಿ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿನ ಅಪರಾಧವು ಸಂಜ್ಞೇಯ ಅಪರಾಧವಾಗಿದ್ದು ಮತ್ತು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಳ್ಳುವ ಮುಂಚೆ ತನಿಖೆ ಆರಂಭಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.**

**13.** ಅಂತಿಮ ವರದಿಯನ್ನು ಮತ್ತು ಇತರ ದಾಖಲೆಗಳನ್ನು ಪರಿಶೀಲಿಸಿದಾಗ, ಪೊಲೀಸ್ ಅಧಿಕಾರಿಗಳು ಸದರಿ ಅಪರಾಧಗಳು ಸಂಜ್ಞೆಯ ಸ್ವರೂಪದ ಅಪರಾಧಗಳಾಗಿದ್ದು, ಅಧಿಕಾರಿಗಳಿಗೆ ತಲುಪಿದ ಖಚಿತವಾದ ಮಾಹಿತಿಯ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ನಂತರ ತನಿಖೆ ಆರಂಭಿಸಿರುವುದಿಲ್ಲ. ಪ್ರಾಸಾ–3 ರವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ಈ ಕೆಳಗಿನಂತೆ ಸಾಕ್ಷ್ಯ ನುಡಿದಿರುತ್ತಾರೆಃ "ದಿನಾಂಕಃ**16.10.2018** ರಂದು ಬೆಳಗ್ಗೆ **6.00** ಗಂಟೆಗೆ ನಾನು ಕಛೇರಿಯಲ್ಲಿದ್ದಾಗ ಕನ್ನಾಳ ಗ್ರಾಮದಲ್ಲಿ ಆರೋಪಿಯು ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಿರುವ ಕುರಿತು ಭಾತ್ಮಿ ಬಂದ ಮೇರೆಗೆ ಚಾಸಾ**-2** ಮತ್ತು ಚಾಸಾ**-3** ಮತ್ತು ಪಂಚರರು ಮತ್ತು ನಾನು ಹಾಗೂ ಚಾಸಾ**-4** ರಿಂದ ಚಾಸಾ**-7** ರವರ ಕೂಡಿಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಚಾಸಾ**-4** ರವರಿಗೆ ಇಬ್ಬರು ಪಂಚರರು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ಚಾಸಾ**-4** ರವರು ಚಾಸಾ**-2** ಮತ್ತು ಚಾಸಾ**-3** ರವರನ್ನು ಕರೆದುಕೊಂಡು ಬಂದಿರುತ್ತಾರೆ. ನಂತರ ಠಾಣೆಯಿಂದ ಘಟನಾ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ನೋಡಿ ಭಾತ್ಮಿ ಮಾಹಿತಿಯನ್ನು ಖಚಿತಪಡಿಸಿಕೊಂಡು ಪಂಚರರ ಸಮಕ್ಷಮ ದಾಳಿ ಮಾಡಿದಾಗ ಆರೋಪಿಯು ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ನಂತರ ಗುನ್ಹೆ ಸ್ಥಳದಲ್ಲಿದ್ದ ಟಿಪ್ಪರ್

ಲಾರಿಯನ್ನು ಪಂಚರರ ಸಮಕ್ಷಮ ಜಪ್ತಿಪಡಿಸಿಕೊಂಡಿರುತ್ತೆವೆ. ಟಿಪ್ಪರ್ ಲಾರಿಯಲ್ಲಿ **10** ಕ್ಯೂಬಿಕ್ ಮೀಟರ್ ಮರಳು ಕಂಡುಬಂದಿರುತ್ತದೆ. ನಂತರ ಅದೆ ದಿನ ಮದ್ಯಾಹ್ನ **12.15** ರಿಂದ **1.00** ಗಂಟೆಯವರೆಗೆ ಪಂಚರರ ಸಮಕ್ಷಮ ಜಪ್ತಿಪಂಚನಾಮೆಯನ್ನು ಜರುಗಿಸಿ ಮಾದರಿ ಸಮೀಕ್ಷೆಗಾಗಿ **500** ಗ್ರಾಂ. ಮರಳನ್ನು ಪಂಚರರ ಸಮಕ್ಷಮ ಸಂಗ್ರುಹಿಸಿ ಎ ಎಂಬ ಅಕ್ಷರದಿಂದ ಸೀಲ್ಡ್ ಹಾಕಿ ಜಪ್ತಿಪಡಿಸಿಕೊಂಡಿರುತ್ತೆವೆ. ನಂತರ ಮುದ್ದೆ ಮಾಲು ಮತ್ತು ಒಂದು ವರದಿಯೊಂದಿಗೆ ಠಾಣೆಗೆ ಬೆಳಗ್ಗೆ **9.30** ಗಂಟೆಗೆ ಬಂದು ಆರೋಪಿಯ ವಿರುದ್ದ ದೂರು ನೀಡಿರುತ್ತೆನೆ" ಸಾಕ್ಷ್ಯ ನುಡಿದಿರುತ್ತಾರೆ.

**14**. ನಿ.ಪಿ–3 ಪಿರ್ಯಾದಿಯನ್ನು ಪರಿಶೀಲಿಸಿದಾಗ, ದಿನಾಂಕ 16.10.2018 ರಂದು ಬೆಳಿಗ್ಗೆ 09.30 ಗಂಟೆಗೆ ಪೊಲೀಸ್ ವೃತ್ತ ನಿರೀಕ್ಷಕರು(ಸಿ.ಪಿ.ಐ) ಠಾಣೆಗೆ ಹಾಜರಾಗಿ ಮುದ್ದೆಮಾಲುಗಳನ್ನು, ಲಾರಿಯನ್ನು ಹಾಜರುಪಡಿಸಿ ಜಪ್ತಿ ಪಂಚನಾಮೆಯೊಂದಿಗೆ ತಮ್ಮ ವರದಿ ಸಲ್ಲಿಸಿದ ಆಧಾರದ ಮೇಲಿಂದ ಠಾಣಾ ದೂರಿನ ನಂ.156/2018 ಭಾರತೀಯ ದಂಡ ಸಂಹಿತೆ ಕಲಂ.379 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ನಿ.ಪಿ–1 ದಾಳಿ ಪಂಚನಾಮೆಯನ್ನು ಪರಿಶೀಲಿಸಿದಾಗ, ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ದಾಳಿ ಮಾಡಿದ್ದು ಮತ್ತು ಪಂಚನಾಮೆಯನ್ನು 16.10.2018 ಬೆಳಿಗ್ಗೆ 07.30 ರಿಂದ 08–30 ಎ.ಎಂ.ರವರೆಗೆ ಜರುಗಿಸಿರುವುದು ಕಂಡುಬರುತ್ತದೆ.

**15**. ಈ ಮೇಲಿನ ಸಾಕ್ಷ್ಯದ ಭಾಗವನ್ನು ಪರಿಶೀಲಿಸಿದಾಗ, ಜಪ್ತಿ ಪಂಚನಾಮೆ, ಸ್ಥಳ ಪಂಚನಾಮೆ ಮತ್ತು ಮುದ್ದೆಮಾಲುಗಳನ್ನು ಜಪ್ತಿಪಡಿಸಿಕೊಂಡ ನಂತರ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿ ಪ್ರಮುಖ ಅಂಶವೇನೆಂದರೆ, ಆರೋಪಿತರ ವಿರುದ್ದ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವ ಮೊದಲು ತನಿಖೆ ಆರಂಭಿಸಿದ್ದು ಮತ್ತು ಜಪ್ತಿ ಪಂಚನಾಮೆ ಮಾಡಲಾಗಿರುತ್ತದೆ. ಪೊಲೀಸ್ ಅಧಿಕಾರಿಗಳ ಈ ಕ್ರಮವು ಲಲಿತಾ ಕುಮಾರಿ

ಪ್ರಕರಣದಲ್ಲಿ ನೀಡಿದ ಸರ್ವೋಚ್ಛ ನ್ಯಾಯಾಲಯದ ಉಪಬಂಧಗಳನ್ನು ಉಲ್ಲಂಘನೆ ಮಾಡಿರುತ್ತಾರೆ.

**F.I.R can not be registered on the basis of the panchanama.**

**Dhayanand @ R.Babu Vs. The State of Karnataka. Criminal Revision Petition No. 129/2021.** Wherein, the Lordship held at para No. 16, the Ex.P-1 being a Panchanama, it can not be turned as a complaint. FIR can not be registered on the basis of Panchanama, however, in the present case the respondent has registered the FIR on the basis of Panchanama which is erroneous and not proper. The Trial Court ought not to have acted upon such a FIR and cognizance should not have been taken on the strength of the said FIR. However, the Trial Court and the Appellate Court have committed error by considering the said FIR as appropriate and proper and recorded the conviction. Such a conviction would be rendered as ineffective and the same can be termed as non est in law. **Further, Lordship held para No. 17,** when registration of FIR itself is void abinitio the subsequent proceedings including the judgments are liable to be set aside. ಈ ತೀರ್ಪನ್ನು ಅನ್ವಯಿಸಿ ನೋಡಲಾಗಿ, ಪ್ರಸ್ತುತ ಪ್ರಕರಣದಲ್ಲಿ ದಾಳಿ ಪಂಚನಾಮೆ ಮತ್ತು ಪಿರ್ಯಾದಿ ಮತ್ತು ಪ್ರಥಮ ವರ್ತಮಾನ ವರದಿಯನ್ನು ಪರಿಶೀಲಿಸಿದಾಗ ಪೊಲೀಸ್

ಅಧಿಕಾರಿಗಳು ಘಟನಾ ಸ್ಥಳಕ್ಕೆ ಬೇಟಿ ನೀಡಿ ಜಪ್ತಿ ಪಂಚನಾಮೆ ಮಾಡಿ ಮುದ್ದೆಮಾಲನ್ನು ವಶಪಡಿಸಿಕೊಂಡು ಇವುಗಳ ಆಧಾರದ ಮೇಲೆ ಪೊಲೀಸ್ ಠಾಣೆಗೆ ಬಂದು ನಂತರ ಪ್ರಥಮ ವರ್ತಮಾನ ದಾಖಲಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ, ಪೊಲೀಸ್ ಅಧಿಕಾರಿಗಳ ಈ ಕ್ರಮವು ದೂಷಿತವಾಗಿರುತ್ತದೆ.

## Section 2(h) in The Code of Criminal Procedure, 1973

(h)"investigation" includes all the proceedings under this Code for the collection of evidence conducted by a police officer or by any person (other than a Magistrate) who is authorised by a Magistrate in this behalf; ಈ ಕಲಂ ನ ಪ್ರಕಾರ ಅನ್ವೇಷಣೆ ಎಂದರೆ ತನಿಖೆ ಅಥವಾ ತಪಾಸಣೆ. ಸಾಕ್ಷ್ಯವನ್ನು ಸಂಗ್ರಹಿಸುವ ಎಲ್ಲಾ ವ್ಯವಹರಣೆಗಳನ್ನು ಒಳಗೊಳ್ಳುತ್ತದೆ. ಒಟ್ಟಿನಲ್ಲಿ ಅನ್ವೇಷಣೆ ಎಂದರೆ ಸಾಕ್ಷ್ಯ ಪುರಾವೆಯ ಸಂಗ್ರಹ. ಅದನ್ನು ಪೊಲೀಸ್ ಅಧಿಕಾರಿ ಅಥವಾ ದಂಡಾಧಿಕಾರಿಯಿಂದ ಆದೇಶಿತನಾದ ಯಾವುದೇ ವ್ಯಕ್ತಿ ಮಾಡಬಹುದು. ಅಪರಾಧ ಸ್ಥಳಕ್ಕೆ ಬೇಟಿ ನೀಡುವುದು, ಪ್ರಕರಣದ ಸಂಗತಿಗಳ ಮತ್ತು ಸಂದರ್ಭಗಳ ಬಗ್ಗೆ ವಿಷಯ ಸಂಗ್ರಹ, ಸಂಶಯಿತರಾದ/ಅನುಮಾನಿತ ಆರೋಪಿತರ ಶೋದನೆ ಮತ್ತು ಬಂಧನ, ಸಾಕ್ಷಿದಾರರ ಮತ್ತು ಆರೋಪಿತರ ಹೇಳಿಕೆಗಳನ್ನು ಬರೆದುಕೊಳ್ಳುವುದು, ಅಪರಾಧಕ್ಕೆ ಉಪಯೋಗಿಸಲಾದ ವಸ್ತುಗಳ ಶೋದನೆ ಮತ್ತು ವಶಪಡಿಸಿಕೊಳ್ಳುವುದು ಈ ಎಲ್ಲಾ ಪ್ರಕ್ರಿಯೆ ಅನ್ವೇಷಣೆ ಅನಿಸುತ್ತದೆ.

**16.** ಈ ಸಮಯದಲ್ಲಿ ಈ ತೀರ್ಪನ್ನು ಅನ್ವಯಿಸುವುದು ಸೂಕ್ತವೆನಿಸುತ್ತದೆ. ಖ್ಹಿಜ **Hon'ble High Court of Karnataka, Dharwad Bench in Criminal**

**Petition No. 103422/2023 dated: 09.01.2024. In this decision at para No. 4 held the co-ordinate bench of this Court in criminal Petition No.100653/2020 and Criminal Petition No. 100979/2020 has held as follows " 8. admittedly when the raid, search and the seizer was carried out prior to the registration of FIR, the same is impermissible. Any seizer made can not be relied upon in evidence because the said seizer is tainted. In view thereof, the continuance of the proceedings it self would yield no result, since the very basis of the complaint being a seizer of incriminating articles can not be relied upon during the course of trial. In view thereof, I am of the considered opinion that, the proceedings in Crime No. 40/2020 pending on the file of the Prl.Civil Judge and JMFC, Jamakandi are required to be quashed and are therefore quashed".** ಗೌರವಾನ್ವಿತ ಉಚ್ಛನ್ಯಾಯಾಲಯದ ನ್ಯಾಯಾಧೀಶರು ಕರ್ನಾಟಕ ಅಬಕಾರಿ ಅಧಿನಿಯಮ ಕಲಂ 32 ಮತ್ತು 34 ಕ್ಕೆ ಸಂಬಂದಿಸಿದಂತೆ ತೀರ್ಪನ್ನು ನೀಡಿದರೂ ಸಹಿತ ಸದರಿ ತೀರ್ಪಿನಲ್ಲಿರುವ ಸಾರಾಂಶವೇನೆಂದರೆಃ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವ ಮೊದಲು ದಾಳಿ, ಸ್ಥಳ ಮತ್ತು ಜಪ್ತಿ ಪಂಚನಾಮೆಗಳಿಗೆ ಅವಕಾಶ ಇರುವುದಿಲ್ಲವೆಂದು ಈ ಮೇಲಿನ ತೀರ್ಪಿನಿಂದ ಸ್ಪಷ್ಟವಾಗಿ ಕಂಡುಬರುತ್ತದೆ.

**17.** ಈ ಪ್ರಕರಣದ ಮಹಜರು ಸಾಕ್ಷಿದಾರರಾದ ಚಾಸಾ**–2** ಚಾಂದಪಾಷ ರವರನ್ನು ಪ್ರಾಸಾ**–1** ಎಂದು ವಿಚಾರಣೆಗೆ ಒಳಪಡಿಸಿದ್ದು, ಪ್ರಾಸಾ–1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನನ್ನನ್ನು ಪೋಲಿಸರು ಯಾವುದೆ ದಾಳಿ ಪಂಚನಾಮೆಗೆ ಕರೆದುಕೊಂಡು ಹೋಗಿರುವುದಿಲ್ಲ. ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮತ್ತು ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಸದರಿ ದಾಖಲೆಗಳು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನಾನು ಯಾವುದೆ ದಾಳಿಯಲ್ಲಿ ಭಾಗವಹಿಸಿರುವುದಿಲ್ಲ ಮತ್ತು ಪೋಲಿಸರು ನನ್ನನ್ನು ಯಾವುದೆ ದಾಳಿಗೆ ಪಂಚರರಾಗಿ ಕರೆದುಕೊಂಡು ಹೋಗಿರುವುದಿಲ್ಲ.

ಪೋಲಿಸರು ನನ್ನ ಸಮಕ್ಷಮ ಯಾವುದೆ ದಾಳಿಯನ್ನು ಮಾಡಿ ವಾಹನ ಮತ್ತು ಮರಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಮಾನ್ಯ ಸ.ಸ.ಅ ರವರು ಪ್ರಾಸಾ–1 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಅಭಿಯೋಜನೆ ಪ್ರಕರಣದವರು ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸಿರುವುದಿಲ್ಲ ಮತ್ತು ಸಾಕ್ಷಿದಾರು ಮುದ್ದೆಮಾಲುಗಳನ್ನು ಗುರುತಿಸಿರುವುದಿಲ್ಲ.

**18.** ಈ ಪ್ರಕರಣದ ಮಹಜರು ಸಾಕ್ಷಿದಾರರಾದ ಚಾಸಾ–**3** ಬಸವರಾಜ ರವರನ್ನು ಪ್ರಾಸಾ–**2** ಎಂದು ವಿಚಾರಣೆಗೆ ಒಳಪಡಿಸಿದ್ದು**,** ಪ್ರಾಸಾ–2 ರವರು ತಮ್ಮ ಮುಖ್ಯವಿಚಾರಣೆಯಲ್ಲಿ**,** ನನ್ನನ್ನು ಪೋಲಿಸರು ಯಾವುದೆ ದಾಳಿ ಪಂಚನಾಮೆಗೆ ಕರೆದುಕೊಂಡು ಹೋಗಿರುವುದಿಲ್ಲ. ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮತ್ತು ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಸದರಿ ದಾಖಲೆಗಳು ಯಾವುದರ ಕುರಿತು ಮತ್ತು ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನಾನು ಯಾವುದೆ ದಾಳಿಯಲ್ಲಿ ಭಾಗವಹಿಸಿರುವುದಿಲ್ಲ ಮತ್ತು ಪೋಲಿಸರು ನನ್ನನ್ನು ಯಾವುದೆ ದಾಳಿಗೆ ಪಂಚರರಾಗಿ ಕರೆದುಕೊಂಡು ಹೋಗಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೆ ದಾಳಿಯನ್ನು ಮಾಡಿ ವಾಹನ ಮತ್ತು ಮರಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಮಾನ್ಯ ಸ.ಸ.ಅ ರವರು ಪ್ರಾಸಾ–2 ರವರನ್ನು ಪಾಟಿ ಸವಾಲು ಮಾಡಿದಾಗ್ಯೂ ಸಹ ತಮ್ಮ ಪರವಾದ ಅನುಕೂಲಕರವಾದ ಅಂಶಗಳನ್ನು ಹೊರತೆಗೆಯುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಅಭಿಯೋಜನೆ ಪ್ರಕರಣದವರು ಜಪ್ತಿ ಪಂಚನಾಮೆಯನ್ನು ರುಜುವಾತು ಪಡಿಸಿರುವುದಿಲ್ಲ ಮತ್ತು ಸಾಕ್ಷಿದಾರು ಮುದ್ದೆಮಾಲುಗಳನ್ನು ಗುರುತಿಸಿರುವುದಿಲ್ಲ.

**19.** It is settled principle of law that mere marking of seizure panchanama is no proof of its contents of it. In

this regard it is beneficial to refer to the decision of Hon'ble High Court of Karnataka reported in **2001-ILR(Kar)-0-3203,=[2001-KantLJ-6-499] in between Chakravathy Vs State by Koramangala Police** the para number 22 reads as under ;

> *22) THIS case is no better than the case in haji a. h. Contractor, supra. In our opinion, this is still worse as the panch witness has not supported the prosecution and the investigating officer, P. W. 11 has not whispered the contents of ex. P. 3. Neither the document, Ex.P. 3 nor its contents is admitted by the defence.* ***Mere marking of ex. P. 3 the panchanama, is no proof of its contents. The prosecution cannot avail the benefit of those contents, which remained unspoken by the pancha witnesses and also by the investigating officer, the author of ex. P. 3-panchanama. We have already noticed that this is a very important piece of material to draw conclusions as to the guilt of the accused****. It is in this document that one can read the movement of the accused, the opening of the door leading to the terrace, the bloodstains at various places in house, etc. Therefore, the contents of ex. P. 3-spot panchanama, are not brought in evidence before the trial court and in our opinion, the court cannot examine the contents of such a document in the*

> *absence of evidence by the author of the document himself. It is these circumstances, which clearly go to the root of the prosecution's case and lend credence to the theory of the defence that the rare possibility of an outside agency creeping into the house at that midnight is not ruled out.*

The ratio laid down by the Hon'ble High Court of Karnataka reported in **2001-ILR(Kar)-0-3203,=[2001-KantLJ-6-499] in between Chakravathy Vs State by Koramangala Police** is that mere marking of panchanama is not proof of its contains. Therefore in the considered opinion of this court the benefit of doubt shall go to the accused. In the present case seizure panchanama of seizing the liquor bottles from the possession of the accused is not proved. In the present case panchanama is not proved by the prosecution.

**20.** ಈ ಮೇಲ್ಕಂಡ ಅಂಶಗಳನ್ನು ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿದಾಗ ಪ್ರಾಸಾ-1 ರಿಂದ 3 ರವರ ಮೌಖಿಕ ಸಾಕ್ಷ್ಯ ಮತ್ತು ದಾಖಲಾತಿ ಸಾಕ್ಷ್ಯಗಳ ಮದ್ಯ ವ್ಯತಿರಿಕ್ತ ಅಂಶಗಳು ಕಂಡುಬಂದಿದ್ದು ಒಂದಕ್ಕೊಂದು ಪೂರಕವಾಗಿರುವುದಿಲ್ಲ. ಆರೋಪಿತರೇ ಅಭಿಯೋಜನೆ ಪ್ರಕರಣದಂತೆ ಅಪರಾಧವನ್ನು ಎಸಗಿರುತ್ತಾರೆ ಎಂದು ನಂಬುವುದು ಅಸ್ಪಷ್ಟವಾಗಿದ್ದು ಮತ್ತು ಆರೋಪಿತರೇ ಅಪರಾಧ ಎಸಗಿರುತ್ತಾನೆ ಎಂದು ಖಚಿತ ಅಭಿಪ್ರಾಯಕ್ಕೆ ಬರಲು ಸಾಕ್ಷ್ಯದಾರಗಳಿಂದ ಸಂಶಯ ಉಂಟಾಗಿರುತ್ತದೆ. ಕಾನೂನಿನ ಅಡಿ ನಿರ್ಧರಿತ ತತ್ವಗಳ ಪ್ರಕಾರ ಸದರಿ ಸಂಶಯದ ಲಾಭವನ್ನು ಆರೋಪಿತರು ಪಡೆಯಲು ಅರ್ಹನಾಗಿರುತ್ತಾರೆ. ಪೋಲಿಸ ಅಧಿಕಾರಿಗಳು ಪ್ರಕರಣದಲ್ಲಿ ಆರೋಪಿತರ

ವಿರುದ್ಧ ಮಾಡಿರುವ ಜಪ್ತಿ ಪಂಚನಾಮೆ, ಸ್ಥಳ ಪಂಚನಾಮೆ ಮತ್ತು ಪ್ರಥಮ ವರ್ತಮಾನ ವರದಿ ದಾಖಲಿಸಿರುವ ಪ್ರಕ್ರಿಯೆಯು ದಂಡ ಪ್ರಕ್ರಿಯಾ ಸಂಹಿತೆ ಕಲಂ. 154 ರಡಿಯಲ್ಲಿನ ಉಪಬಂದಗಳ ಉಲ್ಲಂಘನೆ ಆಗಿರುತ್ತದೆ. ಕಡತದಲ್ಲಿನ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ್ದು, ಅಭಿಯೋಜನೆಯು ಆರೋಪಿತನ ವಿರುದ್ಧ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಅಂಶ ನಂ.1 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**21.** <u>ಅಂಶ **2:–**</u> ಅಂಶ ನಂ.**1** ಕ್ಕೆ ಈ ಮೇಲ್ಕಂಡಂತೆ ಉತ್ತರಿಸಿರುವುದರಿಂದ ಈ ಕೆಳಕಂಡಂತೆಃ

## ಆದೇಶ

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿ ಮಾಡಲಾದ ಆರೋಪದಿಂದ ಈ ಕೂಡಲೇ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ವಾಹವನ್ನು ಈಗಾಗಲೇ ಅರ್ಜಿದಾರರ ಪರವಾಗಿ ಬಿಡುಗಡೆಗೊಳಿಸಿದ್ದು, ಮೇಲ್ಮನವಿಯ ಅವದಿ ಮುಗಿದ ನಂತರ ನಿರುಪಾದಿಕಗೊಳಿಸಲಾಗಿದೆ.

ಮು.ಮಾ–1 ಮರಳು (500 ಗ್ರಾಂ) ಬೆಲೆ ಬಾಳದ ಸ್ವತ್ತು ಆಗಿದ್ದು, ಮೇಲ್ಮನವಿಯ ಅವಧಿ ಮುಗಿದ ನಂತರ ಸರ್ಕಾರಕ್ಕೆ ನಾಶಪಡಿಸಲು ಆದೇಶಿಸಲಾಗಿದೆ.

ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ರಡಿಯಲ್ಲಿನ ಆರೋಪಿತನ ಮತ್ತು ಜಾಮೀನುದಾರರ ಜಾಮೀನು

ಮುಚ್ಚಳಿಕೆಯು ಈ ತೀರ್ಪು ನೀಡಿದ 6 ತಿಂಗಳ ನಂತರ ರದ್ದಾಗುವುದು ಎಂದು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ನೀಡಿದ್ದು, ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ, ಪರಿಶೀಲಿಸಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ **01** ನೇ ಆಗಸ್ಟ್ 2026 ರಂದು ಘೋಷಿಸಲಾಯಿತು.)

(ಮಹಾಂತೇಶ ಚೌಲಗಿ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ

# ಅನುಬಂಧ

## **1.** ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು:-

| ಕ್ರಮಸಂಖ್ಯೆ | | ಶ್ರೇಣಿ | ಹೆಸರು | ಸಾಕ್ಷ್ಯದ ಸ್ವರೂಪ |
|---|---|---|---|---|
| **1** | | ಪ್ರಾಸಾ–1 | ಚಾಂದಪಾಷ | ಮಹಜರು ಸಾಕ್ಷಿದಾರರು |
| **2** | | ಪ್ರಾಸಾ–2 | ಬಸವರಾಜ | ಮಹಜರು ಸಾಕ್ಷಿದಾರರು |
| **3** | | ಪ್ರಾಸಾ–3 | ಸುರೇಶ | ಫಿರ್ಯಾದುದಾರರು |

## **2.** ಅಭಿಯೋಜನೆಯ ಪರ ಹಾಜರುಪಡಿಸಿದ ದಾಖಲೆಗಳು:-

| ಕ್ರಮ ಸಂಖ್ಯೆ | ನಿಶಾನೆಗಳ ಸಂಖ್ಯೆ | | ವಿವರಣೆ |
|---|---|---|---|
| 1 | ನಿ ಪಿ 1 | | ದಾಳಿ ಪಂಚನಾಮೆ, |

| | | | |
|---|---|---|---|
| 2 | ನಿ ಪಿ 2 | | ಸ್ಥಳ ಪಂಚನಾಮೆ |
| 3 | ನಿಪಿ.3 | | ಪಿರ್ಯಾದಿ |
| 4 | ನಿಪಿ.4 | | ಪ್ರಥಮ ವರ್ತಮಾನ ವರದಿ |

**3.** ಆರೋಪಿ/ತರ ಪರ ವಿಚಾರಣೆ ಮಾಡಿದ ಸಾಕ್ಷಿಗಳು:–

---- ಇಲ್ಲ ----

**4.** ಆರೋಪಿ/ತರ ಪರ ಹಾಜರುಪಡಿಸಿದ ದಾಖಲೆಗಳು:–

---- ಇಲ್ಲ -----

**5.** ನ್ಯಾಯಾಲಯದ ಪರ ವಿಚಾರಣೆ ಮಾಡಿದ ಸಾಕ್ಷಿಗಳು:–

---- ಇಲ್ಲ ----

**6.** ನ್ಯಾಯಾಲಯದ ಪರ ಹಾಜರುಪಡಿಸಿದ ದಾಖಲೆಗಳು:–

---- ಇಲ್ಲ ----

ಅಭಿಯೋಜನೆಯ ಪರ ಗುರುತು ಮಾಡಿದ ಮುದ್ದೆ ಮಾಲುಗಳು:-

| | |
|---|---|
| ಮು.ಮಾ–1 | 500 ಗ್ರಾಂ. ಮರಳು |

MAHANTESH RAYAPPA CHOULAGI

Digitally signed by MAHANTESH RAYAPPA CHOULAGI
Date: 2026.08.07 13:30:46 +0530

01.08.2026
(ಮಹಾಂತೇಶ ಚೌಲಗಿ)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕುಷ್ಟಗಿ